ಮೇಲೆಯ ಮಾರುತಾ, ಮೈಲೆಯ ಮಾರುತಾ ಆಮೇಲೆ...'

ಅವಳ ಮುಖ ಕೆಂಪಾಯಿತು. '...ಮುಂದುವರ್ಸಿದ್ರೆ ನಿನ್ನ ಮೈಮೇಲೇ ಸುರುಗ್ತೀನಿ' ಕಸದ ಚೀಲ ಮೇಲೆತ್ತಿದಳು.

'ಸುರುಗು. ನಿನ್ನೆಂಜಲೆ ತಾನೆ? ನಂಗದು ಪ್ರಸಾದ' ಕೈಕಟ್ಟಿ ಬಿಂಕದಿಂದ ನಿಂತ.

'ಹೌದಾ? ನಂಗಿವತ್ತು ಮೂರನೆ ದಿನ...' ಕಿಸಕ್ಕಂತ ನಕ್ಕಳು.

'...ಪೋಲಿ ತಂದು. ಎಸಿ ಆ ಡ್ರಂನಲ್ಲಿ' ಕೆನ್ನೆ ಗಟ್ಟಿ ಹಿಂಡಿದ.

ಬೇರೆ ದೃಶ್ಯ ಬಂತು. 'ಇವತ್ತಿನ ಹುಡುಗ್ರಿಗೆ ಕನ್ನಡ ಸರಿಯಾಗಿ ಮಾತಾಡೋಕೆ ಬರೋದಿಲ್ಲ. ಆದರೆ ಕಾಗುಣಿತ ಹೇಗೆ ಕಾವ್ಯಮಯವಾಗಿ ಹೊಂದಿಸ್ತಾರೆ ನೋಡಿದ್ರ?'

ಕನಕಾದೇವಿಯ ಕೆನ್ನೆ ನಸುಗೆಂಪಾಯಿತು. ಮಾತಾಡಲಿಲ್ಲ. ನಿರ್ಮಾಲ್ಯದ ಹೂವು ಹೊರಗಿಡೋರಿಗೆ ಒಂದು ವ್ಯವಸ್ಥೆ ಮಾಡಬೇಕಾ ಅಂತ ಚರ್ಚಿಸುತ್ತ ಮೆಟ್ಟಲೇರಿದರು. ಕನಕಾದೇವಿ ಫ್ಲ್ಯಾಟು ಬಂತು. 'ಕಾಫಿ ಕುಡಿತೀರ?' ಕೇಳಿದರು. 'ಆಗಲಿ, ಬೆಳಿಗ್ಗೆ ಮನೇಲಿ ಕಾಫಿ ಅಷ್ಟು ಸರಿಯಾಗ್ಲಿಲ್ಲ...' ಹಿಂಬಾಲಿಸಿ ಒಳಗೆ ಹೋದರು. ಕಸದ್ದು ಲಿಫ್ಟಿಂದು ಅಂತೆಲ್ಲ ಆಸಡ್ಡೆಯಿಂದಿದ್ದು ಬಚಾವಾಗಿದ್ದವರು ಈಗ ಫೋಟೊ ಸಮೇತ ಸಿಕ್ಕಿಹಾಕಿಕೊಳ್ಳತೊಡಗಿದ್ದಕ್ಕೆ ಜನಕ್ಕೆ ಅಚ್ಚರಿಯಾಗತೊಡಗಿತು. ಡ್ರಂ ಮೇಲೆ ಕ್ಯಾಮರಾ ಹಾಕಿದ್ದು ಹಬ್ಬುತ್ತ ಇಡೀ ಅಪಾರ್ಟ್‌ಮೆಂಟಿಗೆ ಗೊತ್ತಾಯಿತು. ನಾಕು ದಿನಗಳ ನಂತರ ಬೆಳಿಗ್ಗೆ ಮಾಮೂಲಿನಂತೆ ಆ್ಯಪ್ ನೋಡುತ್ತಿದ್ದವರಿಗೆ ಬೆಕ್ಕು ಹೆಗ್ಗಣಗಳ ಹೊರತಾಗಿ ಯಾರೂ ಸಿಕ್ಕಿಹಾಕಿಕೊಳ್ಳಲಿಲ್ಲ. ಮಾಮೂಲು ಸಮಯದ ಚಿತ್ರದಲ್ಲಿ ಪ್ರಮೋದ್ ಮಾರುತಾ ಜೋಡಿಯಿಲ್ಲ!

'ಏನಾಗಿರಬಹುದು ಅನಿಸುತ್ತೆ ಕನಕಾದೇವಿ? ಇಬ್ರೂ ಬೇರೆ ಜಾಗ ಹುಡುಕಿಕೊಂಡಿರಬಹುದಾ?' ಮೆಟ್ಟಿಲು ಹತ್ತುವಾಗ ಕೇಳಿದರು. 'ಗೊತ್ತಾಗ್ತಿಲ್ಲ ನಂಗೂ' ಅಂದರು. '...ಕಂಡುಹಿಡೀಬೇಕಲ್ಲಾ' ಅನ್ನುತ್ತ ಮನೆಯೊಳಗೆ ಹಿಂಬಾಲಿಸಿದರು.

'ಅವರಿಬ್ರೂ ಊರಲ್ಲಿಲ್ಲ. ನಿನ್ನೆ ವಿಚಾರಿಸಿದೆ.' ಮರುದಿನ ಹೇಳಿದರು ಕನಕಾದೇವಿ. 'ಅಂದ್ರೆ ಊರು ಬಿಟ್ಟು ಓಡಿಹೋಗಿ...' ಉತ್ಕಂಠತೆಯಿತ್ತು.

'ಛೇ!ಛೆ! ಅಂತಾದೆಲ್ಲ ಇದ್ದಿದ್ರೆ ಇಷ್ಟೊತ್ತಿಗೆ ಗದ್ದಲವಾಗಿರೋದು. ಹಾಗೇನಿಲ್ಲ ಅನ್ಸುತ್ತೆ ಬಿಡಿ. ಅದ್ಸರಿ, ಇನ್ನೂ ಯಾಕೆ ಆ್ಯಪ್ ಚಾಲು ಮಾಡಿಲ್ಲ?'

'ಕಸ ಎಲ್ಲಾ ಸರಿ ಹಾಕಿದಾರೆ ಅನಿಸ್ತು. ಅದನ್ನೇ ಏನು ನೋಡೋದು? ನಾಳೆ ನೋಡಿದ್ರಾಯ್ತು. ಸುಬ್ಬರಾವ್‌ಗೆ ಮಗಳ ಬಗ್ಗೆ ಸೂಚನೆ ಕೊಡಬೇಕಾ ಅಂತ ಯೋಚಿಸ್ತಿದ್ದೆ...'

'ಎರಡು ದಿನ ಹೋಗ್ಲಿ, ಸದ್ಯ ಬೇಡ ಅನ್ಸುತ್ತೆ. ಹೌದೂ... ಎಲ್ಲಾ ಬಿಟ್ಟು ಇಬ್ರೂ ಇಂಥಾ ಜಾಗ ಆರಿಸಿಕೊಂಡಿದಾರೆ ನೋಡಿ! ಆಶ್ಚರ್ಯ ಆಗ್ತಿಲ್ವ ನಿಮಗೆ?'

'ಇಲ್ಲ ಕನಕಾದೇವಿ, ಈಗಿನವರಿಗೆ ಅದೇನೋ ಅಡ್ವೆಂಚರ್ ಅಂತಾರಲ್ಲ ಹಾಗೆ – ಸಿಕ್ಕಿ ಹಾಕಿಕೊಳ್ಳಬಹುದಾದ ಜಾಗದಲ್ಲೆ, ಗಂಡಾಂತರ ತರಬಹುದಾದ ಕೆಲಸವನ್ನೇ ಕದ್ದುಮುಚ್ಚಿ ಮಾಡೋದು ಒಂತರ ರೋಮಾಂಚನ. ಎಲ್ಲೋ ಓದಿದೀನಿ, ಮನುಷ್ಯನ ಮೂಲ ಪ್ರವೃತ್ತಿಯ ಆಳದಲ್ಲೆಲ್ಲೊ ಇದ್ದು ಎಲ್ಲಾ ಸಾಹಸಗಳಿಗೂ ಪ್ರಚೋದನೆ ಕೊಡೋದು ಇದೇ' ವಾಪಸು ಮೆಟ್ಟಲು ಹತ್ತುವಾಗ ಕೇಳಿದರು: 'ಮನೆಯೋರು ಊಟಕ್ಕೆ ಯಾವಾಗ್಩ು ತಡವಾಗಿ ಬರ್ತಾರೆ ಕಾಣುತ್ತೆ?'

'ಅವರು ಅಂಗಡಿಯಿಂದ ಬರೋದು ಸಾಮಾನ್ಯವಾಗಿ ಎರಡು ಗಂಟೆ ಮೇಲೇ. ಮಕ್ಕಳು